ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರ

ಬಾಗೂರು ನವಿಲೆ ಸುರಂಗ ನಿರ್ಮಾಣದ ಕಾರ್ಯದಲ್ಲಿ ನಡೆಯಿತೆನ್ನಲಾದ ಅವ್ಯವಹಾರ

† ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ. ಸಾರ್ವಜನಿಕ ಮಹತ್ವದ ಪ್ರಮುಖ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿರುವುದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ.

ಈ ಹಿಂದೆ ನಮ್ಮ ಕರ್ನಾಟಕ ಸರ್ಕಾರ ಹೇಮಾವತಿ ಯೋಜನೆಯೆನ್ನುವು ಬಾಗೂರು ನವಿಲೆ ಸುರಂಗ ನಿರ್ಮಾಣ ಕಾರ್ಯದಲ್ಲಿ ನಡೆಯಿತು ಎನ್ನಲಾದ ಅವ್ಯವಹಾರದ ಬಗ್ಗೆ ಒಂದು ವಿಚಾರಣಾ ಆಯೋಗವನ್ನು ನೇಮಿಸಿತ್ತು. ಆ ಆಯೋಗ ನವೆಂಬರ್ ೨೭೮೦ದು ನೇಮಕವಾಯಿತು. ಅನಂತರ ಈ ವಿಚಾರಣಾ ಆಯೋಗವು ತನ್ನ ವರದಿಯನ್ನು ೩೧-೭-೮೯ರಲ್ಲಿ ನೀಡಿತು. ಅದನ್ನು ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ೨೧-೬-೯೦ರಲ್ಲಿ ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆದರೆ ವಿಚಾರಣಾ ಕಾಯಿದೆಯನ್ವಯ ಈ ಆಯೋಗವು ನೀಡಿದಂಥ ವರದಿಯನ್ನು ೬ ತಿಂಗಳೊಳಗೆ ಸಭೆಯ ಮುಂದೆ ಇಡಬೇಕು. ಆಲ್ಲದೆ ಹಾಗೆ ಇಡುವಾಗ ಆ ವರದಿಯ ಆಧಾರದಮೇಲೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂಬುದನ್ನೂ ಕೂಡ ಹೇಳಬೇಕಾಗುತ್ತದೆ. ವಿಚಾರಣಾ ಆಯೋಗದ ಕಾಯಿದೆಯ ಪ್ರಕಾರ ಅಂದರೆ ವಿಧಿ ೩ ಮತ್ತು ಉಪವಿಧಿ ೪ರ ಪ್ರಕಾರ ಸರ್ಕಾರ ತೆಗೆದುಕೊಂಡ ಕ್ರಮದ ಬಗ್ಗೆ ಒಂದು ವಿವರವಾದ ಟಿಪ್ಪಣಿಯನ್ನೂ ಕೂಡ ಇಡಬೇಕಾಗಿದೆ. ಆದರೆ ಸರ್ಕಾರ ಆ ಟಿಪ್ಪಣಿಯನ್ನು ಇಡದೆ ತನ್ನ ಕರ್ತವ್ಯ ಲೋಪ ಮಾಡಿದೆ. ಇದು ಕಾನೂನಿಗೆ ವಿರುದ್ಧವಾಗಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಸಂಬಂಧಪಟ್ಟ ಮಂತ್ರಿಗಳೂ ಇದರ ಬಗ್ಗೆ ಒಂದು ಹೇಳಿಕೆಯನ್ನು ನೀಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಜಸ್ಟೀಸ್ ಎನ್. ಸದಾನಂದಸ್ವಾಮಿಯವರ ಎನ್‌ಕ್ವೈರಿ ರಿಪೋರ್ಟ್‌ನ ಬಗ್ಗೆ ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್‌ನ ಪ್ರಕಾರ ಈಗಾಗಲೇ ಸರ್ಕಾರ ಕ್ರಮವನ್ನು ಕೈಗೊಂಡಿದೆ. ಈ ರೀತಿ ನಾವು ಕೈಗೊಂಡಿರತಕ್ಕ ಕ್ರಮ ಏನು ಎಂಬುದನ್ನು ಶೀಘ್ರದಲ್ಲೇ ಸಭೆಯ ಮುಂದೆ ಮಂಡಿಸಂತ್ತಿದ್ದೇವೆ. ಈ ವಿಚಾರ ಬಹಳ ಪ್ರಾಮುಖ್ಯವಾದುದು ಎಂಬುದು ನಮಗೂ ಗೊತ್ತಿದೆ. ಮಾನ್ಯ ಸದಸ್ಯರು ಹೇಳಿದಂತೆ ಆ ಕ್ರಮಗಳನ್ನು ಕೂಡ ಅಂದರೆ ಏನೇನು ತೆಗೆದುಕೊಂಡಿದ್ದೇವೆಂಬುದನ್ನು ಸದನಕ್ಕೆ ತಿಳಿಸುತ್ತಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ.—ನೀವು ಮುಂದೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಯಾವ ವಿಚಾರಣಾ ಆಯೋಗದ ವರದಿಯನ್ನು ನೀವು ಸಭೆಯ ಮುಂದೆ ಮಂಡಿಸಬೇಕೋ ಆದಕ್ಕೆ ಮುಂಚಿತವಾಗಿ ಆ ಕಮಿಷನ್‌ನವರು ಏನೇನು ಶಿಫಾರಸುಗಳನ್ನು ಮಾಡಿದ್ದಾರೆ. ಏನು ಕ್ರಮಗಳನ್ನು ಅವುಗಳ ಬಗ್ಗೆ ತೆಗೆದುಕೊಳ್ಳಬೇಕಾಗಿತ್ತು, ಅಥವಾ ತೆಗೆದುಕೊಂಡ ಕ್ರಮ ಏನು ಎನ್ನುವ ವಿವರಗಳ ಒಂದು ಟಿಪ್ಪಣಿಯನ್ನು ತಾವು ಈ ಸಭೆಯ ಮುಂದೆ ಇಡಬೇಕಾಗಿತ್ತು. ಈ ವಿಚಾರದಲ್ಲಿ ನಾನು ಯಾವುದೇ ವಿಧವಾದ ಪೂರ್ವಗ್ರಹ ಪೀಡಿತನಾಗಿ ಕೇಳುತ್ತಿಲ್ಲ. ಗುತ್ತಿಗೆದಾರರಿಗೆ ನೀಡಿದಂಥ ಪರಿಹಾರದ ಮೊಬಲಗಿನ ಬಗ್ಗೆ ಸರ್ಕಾರ ಅತ್ಯಂತ ತೀವ್ರ ಗಮನವನ್ನು ಹರಿಸಬೇಕಾದ್ದು ಬಹಳ ಅಗತ್ಯವಿದೆ ಎನ್ನತಕ್ಕ ಮಾತನ್ನು ವಿಚಾರಣಾ ಆಯೋಗದವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಈಗ ಏನು ಗುತ್ತಿಗೆದಾರರಿಗೆ ಪರಿಹಾರವನ್ನು ನೀಡಿದ್ದೀರಿ, ಅದು ಸಾರ್ವಜನಿಕರ ಹಿತಕ್ಕೆ ವಿರುದ್ಧವಾಗಿದೆ, ಸಂಬಂಧಪಟ್ಟ ಅಧಿಕಾರಿಗಳು ನಿವೃತ್ತರಾಗಿರಲಿ, ಅಥವಾ ಕೆಲಸದಲ್ಲಿರಲಿ, ಅವರ ಮೇಲೆ ತೀವ್ರವಾದ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಮಾತನ್ನು ಈ ವಿಚಾರಣಾ ಆಯೋಗದವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆದಾಗ್ಯೂ ಈ ವಿಚಾರಣಾ ಆಯೋಗದ ಶಿಫಾರಸ್ಸಿನ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಬಗ್ಗೆ ಕಾನೂನು ರೀತಿಯಲ್ಲಿ ಇಡಬೇಕಾಗಿತ್ತು. ಇದರಲ್ಲಿ ಲೋಪ ಉಂಟಾಗಿದೆ. ಆದ್ದರಿಂದ ಈ ಲೋಪದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಸಚಿವರು ಏನು ಹೇಳುತ್ತಾರೆಂಬ ಬಗ್ಗೆ ಉತ್ತರಿಸಬೇಕೆಂದು ನಾನು ಕೇಳಬಯಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ಸರ್ಕಾರದವರು ತೆಗೆದುಕೊಂಡಿರತಕ್ಕಂಥ ಕಾರ್ಯಕ್ರಮಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

MR. SPEAKER.—The new Government came into being in December, 1989 and the Hon. Minister placed a copy of the Report on the Table of the House on 21st June, 1989. You had a full 6 months to apply your mind. Thereafter, as per the Commission of Inquiry Act' 1952, which is a mandatory provision, I quote :

> "The appropriate Government shall cause to be laid on the House of the People, the Legislative Assembly of the State, the report, if any, of the Commission and the enquiry made by the Commission under sub-section 1 together with the Memorandum of the action taken thereon within a period of 6 months from the submission of the report by the appropriate Government."

The Act makes it obligatory on the part of the Government. Your responsibility is not over by simply placing the copy of the report on the Table of the House. I think, there is an obligation on you to place on the Table of the House, the action taken on the report within 6 months. Do you have anything to say ?

SRI VEERENDRA PATIL.—Sir, I want to clarify the position. The Report of the Commission has been placed on the Table of the House. As far as the question of taking action as per the recommendations of the Commission is concerned, certain formalities have to be completed before taking the action. Straightway, we cannot take action since there are certain officers who have been retired and against whom the action is to be taken. We have to follow certain procedure. The Government has accepted the recommendations of the Commission Now, the question of taking action against the concerned is under active consideration of the Department and we will certainly take action whatever recommended in the Report of the Commission. If we say, we are not going to take the action, it is a different matter. The Government has placed the report on the Table of the House and we have already made it clear that we are going to take action as per the recommendations of the Commission.

ಶ್ರೀ ಹೆಚ್. ವಿಶ್ವನಾಥಯ್ಯ.—ಈಗಲೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. It is obligatory on the part of the Government to place the report before this House within 6 months from the date of its submission. Why have they not placed it ? ಇದು ಒಂದು. ಎರಡನೆಯದಾಗಿ ಈ ಸಭೆಯ ಒಳಗೆ ಮಂಡನೆ ಮಾಡಬೇಕಾದರೆ, ಮಂಡನೆ ಮಾಡುವ ದಿವಸವೇ ಈ ಶಿಫಾರಸ್ಸುಗಳ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮದ ಬಗ್ಗೆ ವಿವರಣೆಗಳನ್ನು ನೀಡಬೇಕು. ಈ ಎರಡು ವಿಚಾರಗಳ ಬಗ್ಗೆಯೂ ಉತ್ತರವನ್ನು ಮಾನ್ಯ ಸಚಿವರು ನೀಡಬೇಕು. ನೀವು ವರದಿಯನ್ನು ಒಪ್ಪಬಹುದು ಒಪ್ಪದಿರಬಹುದು. ಆದರೆ ಈಗ ಮಂಡನೆ ಮಾಡಿದ್ದಾರೆ. ಆರು ತಿಂಗಳ ಅವಧಿಯಲ್ಲಿಯೇ ಇಡಬೇಕು. ಮತ್ತೆ ಅದನ್ನು ಇಡುವಂಥ ಸಂದರ್ಭದಲ್ಲಿ ಅದು ಮಾಡಿರತಕ್ಕಂಥ ಶಿಫಾರಸ್ಸುಗಳ ಮೇಲೆ ಏನು ಕ್ರಮ ತೆಗೆದುಕೊಂಡಿರು ತ್ತಾರೆ ಅದರ ಬಗ್ಗೆ ಟಿಪ್ಪಣಿ ನೀಡಬೇಕು. ಈ ಎರಡೂ ವಿಚಾರಗಳಲ್ಲಿ ತಮ್ಮ ಸರ್ಕಾರ ಲೋಪ ಮಾಡಿದೆ. ಇದು ಬಹಳ ಗಂಭೀರವಾದ ವಿಚಾರ. ಇದರಲ್ಲಿ ಮಾನ್ಯ ಅಧ್ಯಕ್ಷರೇ ತಾವು ನೋಡಬೇಕು, ಯಾವುದನ್ನು ಸಭೆಯಲ್ಲಿ ಇ ತಿಂಗಳೊಳಗೆ ಇಡಬೇಕಾಗಿತ್ತೋ ಅದನ್ನು ಇಡದಂಥ ಸಂದರ್ಭದಲ್ಲಿ ಈ ಸಭೆಗೆ ಕೊಡಬೇಕಾದಂಥ ಗೌರವವನ್ನು ಕೊಡದ ರೀತಿಯಲ್ಲಿ ಈಗ ಇಟ್ಟಿದ್ದಾರೆಂದು ನನ್ನ ಭಾವನೆ. ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಸಭೆಗೆ ಅಗೌರವ ಮಾಡಬೇಕೆಂಬ ಉದ್ದೇಶ ಇಲ್ಲ, ಯಾವುದೇ ಒಂದು ವರದಿಯನ್ನು ೬ ತಿಂಗಳೊಳಗೆ ಇಡಬೇಕು. ಒಂದು ವರದಿ ಬಂದ ಮೇಲೆ ಇಲಾಖೆಯಲ್ಲಿ ಪ್ರೊಸೆಸ್ ಆಗಿ ಕ್ಯಾಬಿನೆಟ್‌ವರೆಗೆ ಹೋಗಿ ಅಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈ ಎಲ್ಲಾ ಫಾರ್ಮಾಲಿಟೀಸ್ ಇದೆ. ಈ ವಿಧ್ಯದಲ್ಲಿ ೬ ತಿಂಗಳ ಅವಧಿಯಲ್ಲಿ ಅಸೆಂಬ್ಲಿ ಮುಂದಿಡುವುದಕ್ಕೆ ಹಿಂದಿನ ಅಸೆಂಬ್ಲಿಯಲ್ಲಿ ಇಡುವುದಕ್ಕೆ ಆಗಲಿಲ್ಲ. ಏಕೆಂದರೆ ಇನ್ನೂ ಪ್ರೊಸೆಸ್ ಆಗುತ್ತಿತ್ತು. ಈ ಅಸೆಂಬ್ಲಿ ಸೇರಿದ ಮೇಲೆ ಅದನ್ನು ನಾವು ಇಟ್ಟಿದ್ದೇವೆ. ಅದರಲ್ಲಿ ಏನು ಶಿಫಾರಸ್ಸು ಮಾಡಿದ್ದಾರೆ, ಅದನ್ನು ಒಪ್ಪಿಕೊಂಡಿದ್ದೇವೆ. ಮುಂದೆ ಯಾವ ರೀತಿ ಮಾಡಬೇಕೆಂಬುದನ್ನು ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೆ.

SRI H. EKANTAIAH.—When it is obligatory to place the report within six months, you have not placed it so for, Now you are placing it. What else it means ?

MR. SPEAKER.—It would have met your point, if the Hon. Minister after placing the report of the Enquiry Commission on the Table of the House, had accepted the recommendation and should have placed the action taken report. The Government has said that they will take action and submit the action taken report. Would that be alright ? If so, that has been fulfilled now.

SRI H. EKANTAIAH.—Sir, that is not the point. ಆರು ತಿಂಗಳೊಳಗೆ ಇಡಬೇಕು. ಪರಿಶೀಲಿಸುವುದಕ್ಕೆ ಸಾಕಷ್ಟು ಸಮಯ ಇರದಿದ್ದರೆ ೬ ತಿಂಗಳೊಳಗೆ ಸಭೆಯ ಮುಂದಿಟ್ಟು ಕ್ರಮ ಕೈಗೊಳ್ಳುತ್ತಿದ್ದೇವೆಂದು ಹೇಳಬೇಕಾಗಿತ್ತು. ಆರು ತಿಂಗಳೊಳಗೆ ಮಂಡನೆ ಮಾಡದೆ ಇರುವುದನ್ನು ತಾವು ಪರಿಶೀಲಿಸಬೇಕಾಗಿದೆ. ಇದು ಈ ಸಭೆಯ ಘನತೆ ಗೌರವಕ್ಕೆ ತಕ್ಕುದಲ್ಲ. ಇವತ್ತು ಸಹ ಅಷ್ಟೇ ಹೇಳಿದರೆ ಸಾಲದು. ಒಪ್ಪಿದ್ದರೆ ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಬೇಕಾಗಿತ್ತು. ಈ ಎರಡು ಲೋಪಗಳ ಬಗ್ಗೆ ಏನಂ ಹೇಳುತ್ತಾರೆಂದು ತಾವು ಕೇಳಬೇಕು.

SRI R. V. DESHPANDE.—Sir, the Hon. Chief Minister, no doubt has placed his views with regard to the practical difficulties. I do understand. However, when there is a mandatory provision according to which it is obligatory on the part of the Government to place the report within 6 months, as rightly pointed out by you, there has been lapse of 6 months. It is also obligatory that there should be a Memorandum. The Government may accept or reject, we are not going into the merits. But, there has been a lapse on the part of the Government. Therefore, the Government has to admit and see that in future such lapses do not recur. The Hon. Chief Minister or the Minister should admit that there has been lapse, may not be purposeful, and that such lapses will not occur in future.

MR. SPEAKER.—I will look into it. ಈಗ ಬೈರೇಗೌಡರ ಗಮನ ಸೆಳೆಯುವ ಸೂಚನೆ.

ಭೂ ಹಗರಣಗಳ ಬಗ್ಗೆ ಕಂಲದೀಪ್‌ಸಿಂಗ್ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿರುವ ಬಗ್ಗೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಗಮನ ಸೆಳೆಯುವ ಸೂಚನೆಗೆ ಆಮೇಲೆ ಬರುತ್ತೇನೆ. ತಾವು ಅಪ್ಪಣೆ ಕೊಡುವುದಾದರೆ ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬೇಕೆಂದಿದ್ದೇನೆ. ವಿಚಾರ ಏನೆಂದರೆ...